INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,169-173
Peer -Reviewed, Refereed Journal

# 'ಲೋಕಾಮುದ್ರಾ' ನಾಟಕದಲ್ಲಿ ಸ್ತ್ರೀ ಸಂವೇದನೆ

ಡಾ.ಕವಿತ ಬಿ.ಎನ್.[1]

ಸಾಹಿತ್ಯವು ಸಮಾಜದ ಬಹು ದೊಡ್ಡ ಹೊಣೆಗಾರಿಕೆಯನ್ನು ಪ್ರಾಚೀನ ಕಾಲದಿಂದಲೂ ಹೊತ್ತು ಸಾಗಿದೆ ಹಾಗೂ ಸಾಗುತ್ತಲೇ ಇದೆ.ಇದು ನೈತಿಕ ಜವಾಬ್ದಾರಿಯ ಶಕ್ತಿಯೆಂಬುದು ಪರಮ ಸತ್ಯ. ಇಂಥ ನೈತಿಕ ಹೊಣೆಗಾರಿಕೆಯ ಸಾಹಿತ್ಯ ಸಂಕೀರ್ಣ ಸಂಗತಿಗಳನ್ನು ಸೃಜನಾತ್ಮಕವಾಗಿಯೇ ನಿಭಾಯಿಸಿದ ರೀತಿ ಅಮೋಘವೆಂದೇ ಹೇಳಬಹುದು. ಭಾರತೀಯ ಸಾಮಾಜಿಕ ಸನ್ನಿವೇಶ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಸಾಹಿತ್ಯ ತನ್ನಲ್ಲಿ ಗರ್ಭೀಕರಿಸಿಕೊಂಡಿರುವ ಪರಿಯೇ ಅತ್ಯಂತ ಮನೋಜ್ಞವಾದದ್ದು. ವಿಚಾರಗಳ ಚರ್ಚೆ ಅದರ ಸೂಕ್ಷ್ಮತೆಯ ಅರಿವನ್ನು ಕಟ್ಟಿಕೊಡುತ್ತಲೇ ವಿಸ್ತೃತವಾದ ಒಂದು ನವಜಗತ್ತನ್ನು ನಿರ್ಮಿಸಿದುದ್ದೇ ಸಾಹಿತ್ಯ. ಇಂಥ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಅನೇಕ ಸಾಹಿತ್ಯಿಕ ಕೃತಿಗಳು ಬೀರಬಲ್ಲ ಪ್ರಭಾವವನ್ನು ಒಂದು ನಾಟಕ ಅತ್ಯಂತ ಸಮರ್ಥವಾಗಿ ಹಾಗೂ ಯಶಸ್ವಿಯಾಗಿ ಬೀರಿರುವ ಅನೇಕ ಉದಾಹರಣೆಯನ್ನು ಕಾಣಬಹುದು.

"ಕಾವ್ಯೇಷು ನಾಟಕಂ ರಮ್ಯಂ" ಎಂಬ ಕಾಳಿದಾಸನ ಮಾತು ಕಾವ್ಯಗಳಿಗೆಲ್ಲಾ ನಾಟಕವೇ ಮನೋಹರವಾದದ್ದು ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಇಂತಹ ನಾಟಕ ಸಾಹಿತ್ಯವು ಪುರಾಣದಿಂದ ಪ್ರಭಾವಿತವಾಗಿ ರಚನೆಯಾದದ್ದಲ್ಲದೆ, ಸಂಸ್ಕೃತ ನಾಟಕಗಳ ಪ್ರಭಾವಕ್ಕೂ ಒಳಪಟ್ಟಿತು.ಆರಂಭದಲ್ಲಿ ರಾಮಾಯಣ ಹಾಗೂ ಮಹಾಭಾರತದಿಂದ ರಚಿತವಾಗುತ್ತಿದ್ದ ನಾಟಕಗಳು ಕಾಲಾಂತರದಲ್ಲಿ ಭಾಗವತಾದಿ ಪುರಾಣಗಳು, ಉಪಪುರಾಣಗಳು ಇದರಲ್ಲಿ ಸೇರ್ಪಡೆಗೊಂಡು ತನ್ನ ಸ್ವರೂಪವನ್ನು ವಿಸ್ತಾರಗೊಳಿಸಿಕೊಂಡಿತು.

ಹೀಗೆ ಪುರಾಣದ ವಸ್ತುವನ್ನಾಧರಿಸಿ ರಚಿಸಲ್ಪಡುತ್ತಿದ್ದ ಪೌರಾಣಿಕ ನಾಟಕದ ವಸ್ತುವಿನ ಪ್ರಮುಖ ಉದ್ದೇಶವೇ ಮನುಷ್ಯನ ಜೀವನಾದರ್ಶವನ್ನು ಪ್ರತಿಪಾದಿಸುವುದು ಅಲ್ಲದೇ ಪರಿಪಾಲಿಸುವುದು. ಧರ್ಮ,ನಿಷ್ಠೆ, ಸತ್ಯ, ತ್ಯಾಗ, ಭಕ್ತಿ, ಗೌರವ ಇಂಥ ಅನೇಕ ಮೌಲ್ಯಗಳ ಮೂಲಕ ಮಾನವಕುಲವನ್ನು ಉನ್ನತೀಕರಿಸುವ, ಆದರ್ಶಪ್ರಾಯರನ್ನಾಗಿಸುವ ಧ್ಯೇಯೋದ್ದೇಶವು ಬದುಕಿಗೆ ಸ್ವೀಕಾರಾರ್ಹ.ಉದಾತ್ತ ಧ್ಯೇಯಗಳಿಂದ ನಿರ್ಧರಿಸಿದ ದಾರಿ, ಸವೆಸಿದ ಹಾದಿ ಸರ್ವರಿಗೂ ಮಾದರಿ.ಇವು ಮನುಷ್ಯನ ವ್ಯಕ್ತಿತ್ವಕ್ಕೆ

---

1.ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀರಂಗಪಟ್ಟಣ.

ಎಂದಿಗೂ ಪ್ರಕಾಶಮಾನತೆಯನ್ನು ಉಂಟುಮಾಡಬಲ್ಲದು ಎಂಬುದನ್ನು ನಿರೂಪಿಸಿದವು. ಹಾಗೆಯೇ ಅದಕ್ಕೆ ವಿರೋಧಾಭಾಸವೆಂಬಂತಿರುವ ವ್ಯಕ್ತಿತ್ವಗಳು ಎದುರಿಸುವ ಸಂಘರ್ಷಗಳು ಹಾಗೂ ಸಂಕಷ್ಟಗಳನ್ನೂ ಬಿತ್ತರಿಸಿದವು. ಹಾಗಾಗಿ ಮನುಷ್ಯ ಸವೆಸಬೇಕಾದ ಆದರ್ಶಪ್ರಾಯವಾದ ನಿಜಬದುಕಿನ ನೆಲೆಯನ್ನು ಕಟ್ಟಿಕೊಟ್ಟುವುಗಳು ಪುರಾಣದ ಹಿನ್ನೆಲೆಯ ನಾಟಕಗಳು ಎಂಬುದನ್ನು ಮರೆಯುವಂತಿಲ್ಲ.

ಹಿಂದಿನಿಂದಲೂ ಹೀಗೆ ಬೆಳೆದುಬಂದಿರುವ ನಾಟಕ ಪರಂಪರೆಯು ಆರಂಭದ ಕಾಲದಲ್ಲಿ ಪ್ರತ್ಯೇಕವಾಗಿ ಕಾಣಿಸಿಕೊಳ್ಳದಿದ್ದರೂ ಕಾಲಾಂತರದಲ್ಲಿ ಇಂಗ್ಲೀಷ್ ನಾಟಕಗಳ ಪ್ರಭಾವದಿಂದ ಆಧುನಿಕ ಸಂದರ್ಭದಲ್ಲಿ ನಾಟಕ ರಚನಾಕಾರರ ಹಾಗೂ ಓದುಗರ, ವೀಕ್ಷಕರ ಪ್ರಮಾಣ ಅಧಿಕಗೊಳ್ಳುತ್ತಾ ನಾಟಕ ಸಾಹಿತ್ಯವು ಹೆಚ್ಚು ಪ್ರಚುರಕ್ಕೆ ಬರಲು ಸಾಧ್ಯವಾಯಿತು.ಈ ಎಲ್ಲಾ ಸಾಧ್ಯತೆಗಳಿಂದ ಹೊಸ ಬಗೆಯ ಚಿಂತನಾ ಲಹರಿಯ ನಾಟಕಗಳು ಕನ್ನಡದಲ್ಲಿ ರಚನೆಯಾಗಲು ಆರಂಭವಾದ ಹಿನ್ನೆಲೆಯಲ್ಲಿ ವಿಶೇಷವಾಗಿ ವೃತ್ತಿರಂಗಭೂಮಿಯ ಪ್ರಯೋಗಕ್ಕಾಗಿಯೇ ಅಧಿಕ ಪ್ರಮಾಣದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ರಚನೆಯಾದವು.

ಹೀಗೆ ಪ್ರಾರಂಭದಲ್ಲಿ ಅಲ್ಪಪ್ರಮಾಣದಂತಿದ್ದ ನಾಟಕ ರಚನೆಯು ಕಾಲಘಟ್ಟ ಬದಲಾದಂತೆ ಬದಲಾದ ಮನೋಧರ್ಮಕ್ಕನುಗುಣವಾಗಿ ಹೊಸ ಚಿಂತನೆಗಳ ಹೂರಣವನ್ನು ಸಭಿಕರೆದುರು ತೆರೆದಿಡುವ ಕಾರ್ಯವು ಕನ್ನಡ ನಾಟಕಗಳಲ್ಲಾದದ್ದು, ಭಿನ್ನ ಮಾದರಿ ನಾಟಕಗಳ ಪರಿಚಯಿಸುವ ನೆಲೆಯಲ್ಲಿ ರೂಪುಗೊಂಡದ್ದು ಶ್ಲಾಘನಾರ್ಹ.

ಈ ನಿಟ್ಟಿನಲ್ಲಿ ಆಧುನಿಕ ಸಾಹಿತ್ಯದ ಒಂದು ಪ್ರಕಾರವಾಗಿ ರೂಪುಗೊಂಡ ನಾಟಕ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯನ್ನು ಚಿಂತನೆಗಳ ಮೂಲಕ ಆಳ ಅಗಲವನ್ನು ಅತ್ಯಂತ ಸೂಕ್ಷ್ಮತೆಯಿಂದ ಅಭಿವ್ಯಕ್ತಗೊಳಿಸುವ ಪ್ರಯತ್ನ ಮಾಡಿದ ಲೇಖಕಿಯರ ಕೊಡುಗೆಯನ್ನು ಮರೆಯಲಾಗದು.ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿರುವ ನಿರ್ಬಂಧಗಳು ಹಾಗೂ ಆಕೆಯ ಸಂವೇದನಾಶೀಲತೆಗೆ ನೀಡುವ ಮನ್ನಣೆಯ ಅರಿವು ತಿಳಿಯದ್ದೇನಲ್ಲ.

ರಾಮಾಯಣದಂತೆ ಮಹಾಭಾರತದಲ್ಲಿಯೂ ಅನೇಕ ಸ್ತ್ರೀ ಪಾತ್ರಗಳು ತಮ್ಮ ಸಂವೇದನೆಯನ್ನು ಸೂಕ್ಷ್ಮವಾಗಿಯೇ ತೆರೆದಿಡುವುದನ್ನು ಕಾಣಬಹುದು. ಮಹಾಭಾರತದಲ್ಲಿ ಕಂಡುಬರುವ ಲೋಪಾಮುದ್ರಾ ಇದಕ್ಕೆ ಒಂದು ಉದಾಹರಣೆ.ಈ ಪಾತ್ರದ ಚಿತ್ರಣವನ್ನು ಕವಿತಾರೈ ಅವರು ತಮ್ಮ 'ಲೋಕಾಮುದ್ರಾ'ಎಂಬ ನಾಟಕದ ಮೂಲಕ ಸ್ತ್ರೀಸಂವೇದನೆಗೆ ಹೊಸ ಆಯಾಮವನ್ನೇ ನೀಡಿದ್ದಾರೆ. ಪುರಾಣದ ಲೋಪಮುದ್ರಾ ಹಾಗೂ ನಾಟಕದ ಒಂದು ಪಾತ್ರವಾಗಿ ಕಾಣಿಸಿಕೊಳ್ಳುವ ಯುವತಿ, ಈ ಎರಡು ಪಾತ್ರಗಳನ್ನು ಮುಖಾಮುಖಿಯನ್ನಾಗಿಸುವ ಮೂಲಕ ಪುರಾಣ ಹಾಗೂ ಪ್ರಸ್ತುತದ ಸ್ತ್ರೀ ಸಮುದಾಯವು ಎದುರಿಸಿದ ಸಮಸ್ಯೆಗಳ ಮೂಲ ಒಂದೇ ಎನ್ನುವಂತೆ ಅನಾವರಣಗೊಳಿಸಲಾಗಿದೆ.

ಲೋಕಾಮುದ್ರಾಳ ಬದುಕಿನಲ್ಲಿ ಬರುವ ಅನೇಕ ಘಟನೆಗಳೆಲ್ಲಾ ಕೌಟುಂಬಿಕ ನೆಲೆಯಲ್ಲಿ ಬಿತ್ತರಗೊಳ್ಳುತ್ತಾ ಸಾಗುವ ದಾಂಪತ್ಯ ಕೇಂದ್ರೀಕೃತವಾದಂತಹ ಸಮಸ್ಯೆಗಳನ್ನು ಚರ್ಚಿಸುತ್ತವೆ. ಆರಂಭದಲ್ಲಿ ಲೋಕಾಮುದ್ರಾಳದು ಆಂತರಿಕ ಸಂಘರ್ಷ ಅದು ಪುರುಷಕೇಂದ್ರಿತವಾದ ನಿಲುವಿನೊಂದಿಗೆ ಸದಾ ಹೋರಾಟದಲ್ಲಿದ್ದು ನಂತರ ಬಾಹ್ಯ ಘರ್ಷಣೆಯ ಸ್ವರೂಪ ತಾಳುತ್ತದೆ. ಇಲ್ಲಿ ವಾಸ್ತವ ಬದುಕಿನ ಚಿಂತನೆಗಳನ್ನು ಓರೆಗೆ ಹಚ್ಚುವಂತೆ ಶತಶತಮಾನಗಳಿಂದ ನಡೆದುಕೊಂಡು ಬಂದಿರುವ ಸ್ತ್ರೀಯರಿಗೆ ಮಾತ್ರವೇ ಸೀಮಿತವೆಂಬಂತೆ ಬಿಂಬಿಸಿರುವ ನಿಯಮಗಳೊಂದಿಗೆ ಘರ್ಷಣೆಯಲ್ಲಿ ತೊಡಗಿ ನಾಟಕವು ಸಹೃದಯರನ್ನು ಚಿಂತನಾಮಂಥನಕ್ಕೆ ಒಳಪಡಿಸುತ್ತದೆ.

ಬ್ರಹ್ಮ ತನ್ನ ಮಗಳಾದ ಲೋಪಾಮುದ್ರಾಳನ್ನು ವೃದ್ಧಾಪ್ಯದ ಸಹಾಯಕ್ಕಾಗಿ ತಪಸ್ಸನ್ನಾಚರಿಸುತ್ತಿದ್ದ ಕವೇರ ಮುನಿಗೆ ವರವಾಗಿ ನೀಡುತ್ತಾನೆ. ಅದರೆ ಕವೇರ ಮುನಿಯು ವೃದ್ಧರಾದ ಅಗಸ್ತ್ಯರ ಮೇಲಿನ ಅಂಧಾಭಿಮಾನದಿಂದ ಅವರ ಮದುವೆಯ ಪ್ರಸ್ತಾಪಕ್ಕೆ ಒಪ್ಪಿ ತನಗೆ ವರವಾಗಿ ಪಡೆದುಕೊಂಡಿದ್ದ ಲೋಪಾಮುದ್ರಾಳನ್ನು ಅಗಸ್ತ್ಯರಿಗೆ ವಿವಾಹಮಾಡಿಕೊಡುತ್ತಾರೆ. ಈ ಕಥಾಸಾರವನ್ನು ಗಮನಿಸಿದರೆ ಪುರುಷ ಸಮುದಾಯದ ಪ್ರತಿನಿಧಿಗಳಾಗಿರುವ ಬ್ರಹ್ಮ,ಕವೇರ ಹಾಗೂ ಅಗಸ್ತ್ಯರ ಏಕಮುಖಿ ಧೋರಣೆಗಳು ಭಿನ್ನವೇನಲ್ಲ. ಬ್ರಹ್ಮ ತನ್ನ ಮಗಳ ಭವಿಷ್ಯವನ್ನು ಆಲೋಚಿಸದೆ ವೃದ್ಧನಾದ ಕವೇರನಿಗೆ ಆಕೆಯನ್ನು ನೀಡಿದ್ದು ಹಾಗೂ ಕವೇರ ಮಗಳಾಗಿ ಪಡೆದದ್ದು ಅವರವರ ಪ್ರತಿಷ್ಠೆ ಸ್ವಾರ್ಥಕ್ಕಾಗಿ ಎಂಬುದು ಲೋಪಾಮುದ್ರಾಳ ಪಾತ್ರದ ಮುಖೇನ ಅಭಿವ್ಯಕ್ತಗೊಳ್ಳುತ್ತದೆ. ಆದರೆ ಕವೇರ ಮುನಿಯೂ ತನ್ನ ಮಗಳಾಗಿ ಪಡೆದ ಲೋಪಾಮುದ್ರಾಳನ್ನೇ ವೃದ್ಧಾಪ್ಯದಲ್ಲಿರುವ ಅಗಸ್ತ್ಯರಿಗೆ ವಿವಾಹಮಾಡಿಕೊಡುವಲ್ಲಿ ಯಾವುದೇ ಪೂರ್ವಾಪರಗಳನ್ನು ಗ್ರಹಿಸದೆ ಅಗಸ್ತ್ಯರ ಮೇಲಿನ ಅಂಜಿಕೆಗೆ ಹೆಮ್ಮೆಯೆಂಬ ಲೇಪನವನ್ನಚ್ಚಿ ಕವೇರಮುನಿಯು ಮಗಳ ಭವಿಷ್ಯದಲ್ಲಿ ಅಂಧ ನಿಲುವು ತಾಳುತ್ತಾನೆ.

ಈ ಮೇಲಿನ ಎಲ್ಲಾ ವಿಚಾರಗಳನ್ನು ಗಮನಿಸಿದಾಗ ಪ್ರತಿಷ್ಠೆ ಸ್ವಾರ್ಥ,ಹೆಮ್ಮೆ ಇವುಗಳಿಗೆಲ್ಲಾ ಬಲಿಯಾದವಳು ಲೋಪಾಮುದ್ರಾ ಮಾತ್ರ. ವೃದ್ಧನಾದ ಅಗಸ್ತ್ಯ ಮುನಿಯನ್ನು ಮದುವೆಯಾದ ಆಕೆ ಸಹಜವಾದ ಲೌಕಿಕ ಬದುಕಿನ ಸಾಂಗತ್ಯವನ್ನು ಇಚ್ಛಿಸಿದವಳು.ವಿವಾಹದ ರೂಪದಲ್ಲಿ ಲೋಪಾಮುದ್ರಾಳನ್ನು ಸ್ವೀಕರಿಸಿದ ಅಗಸ್ತ್ಯ ಆಕೆಯನ್ನು ಆತನ ಅಲೌಕಿಕ ಬದುಕಿನ ಸಾಧನೆಗಾಗಿ ಬಂಧಿಯನ್ನಾಗಿಸಿದನೇ ವಿನಹಃ ಸಾಂಸಾರಿಕ ಉದ್ದೇಶವನ್ನೊಂದಿರಲಿಲ್ಲ. ಹೆಣ್ಣಿನ ಬಯಕೆಗೆ ಸ್ಪಂದಿಸದ ಪ್ರೀತಿ ಅದು ಮಾತಿಗಷ್ಟೇ ಸೀಮಿತವಾದ ಯಾಂತ್ರಿಕತೆ. ಅವರಿಬ್ಬರ ನಡುವೆ ಭಾವನೆಗಳ ಕೊಡುಕೊಳ್ಳುವಿಕೆಗಳಿರಲಿಲ್ಲ ಲೋಪಾಮುದ್ರೆಯು ಅಗಸ್ತ್ಯನ ಅಲೌಕಿಕ ಬದುಕಿನ ಅನುಕರಣೆಯಲ್ಲಿ ತನ್ನ ಅಸ್ಮಿತೆಯನ್ನು ಕಳೆದುಕೊಂಡದ್ದು ದುರಂತವೇ ಸರಿ. "ಧರ್ಮವೆಂದರೆ ಅದೊಂದು ವಂಚನೆ!ಸತಿ ಧರ್ಮವೆಂದರೆ ತಿರಸ್ಕಾರ ನನಗೆ" ಎನ್ನುವ ಲೋಪಾಮುದ್ರಾ ಧರ್ಮವೆಂಬುದು ಕೇವಲ ಸ್ತ್ರೀಗಷ್ಟೇ

ಮೀಸಲಾದ ಪುರುಷ ದಬ್ಬಾಳಿಕೆಗಳಿನುಗುಣವಾಗಿ ರೂಪಿಸಲ್ಪಟ್ಟ ಕಾನೂನು.

ಹೆಣ್ಣಿನ ಮನೋಧರ್ಮವೇ ಬೇರೆ ಅದು ಗಂಡು ರೂಪಿಸಿದ ಸತಿಧರ್ಮದ ಪರಿಕಲ್ಪನೆಗೆ ವಿರೋಧವಾದದ್ದು.ಅದನ್ನು ಮೀರಿ ನಿಂತ ಪರಸ್ಪರ ಭಾವ ಸಂವೇದ ಅಚ್ಚುಗಳೊಳಗೆ ತುಂಬಿದ ಪ್ರೀತಿಯೆಂಬ ಪಾಕ. ಈ ಪಾಕ ಗಟ್ಟಿಗೊಳ್ಳುವುದು ಇಬ್ಬರ ಸಮಾನವಾದ ಸೂಕ್ಷ್ಮ ಸಂವೇದನೆಗಳನ್ನು ಅರ್ಥೈಸಿಕೊಳ್ಳಬಹುದಾದ, ಒಬ್ಬರ ಭಾವನೆಗಳನ್ನು ಒಬ್ಬರು ಗೌರವಿಸಿ ಪ್ರಕೃತಿದತ್ತವಾದ ಅಗತ್ಯಗಳನ್ನು ಪೂರೈಸಿ, ಹಾರೈಸಿ ಪ್ರೀತಿಸಿದಾಗ ಮಾತ್ರವೇ ಈ ಸಂಬಂಧವು ಗಟ್ಟಿಗೊಂಡು, ಅಟ್ಟಿಕೊಂಡು ಆನಂದವನ್ನನುಭವಿಸುತ್ತದೆ. ಇಲ್ಲದಿದ್ದರೆ ಸಂಬಂಧವೇ ಸಂಕೋಲೆಯಾಗಿ ಲೋಕಮುದ್ರಳಂತೆ ಬಿಡುಗಡೆಯ ಹಾದಿಯನ್ನು ಬಯಸುತ್ತದೆ.

ಹೆಣ್ಣಿನ ಬಂಧನವು ಕೌಟುಂಬಿಕ ಸ್ತರದೊಳಗೆ ಗೋಚರವಾಗುತ್ತದೆ. ಆಕೆಯು ಗಂಡನಿಗೆ ದಾಸಿಯಾಗಿ ಮಕ್ಕಳಿಗೆ ಜನ್ಮ ನೀಡುವ ಸಾಕಿ ಸಲುಹುವ ವ್ಯಕ್ತಿಯಾಗಿ ನಿಲ್ಲುವ ಆಕೆ ಸ್ವತಂತ್ರ ವ್ಯಕ್ತಿತ್ವವನ್ನೇ ಹೊಂದಿಲ್ಲದಂತೆ ಸಮಾಜವು ಪರಿಗಣಿಸಿದೆ. "ಬಂಧಿಯಾದ ಸತಿಯ ಏಕತಾನತೆ, ನಿರರ್ಥಕತೆಗಳು ನೋಡುವವರ ಕಣ್ಣಿಗೆ ಕಾಣಲಾರವು, ಮನಸ್ಸನ್ನು ತಟ್ಟಲಾರವು" ಎಂಬ ಲೋಕಾಮುದ್ರಾಳ ಮಾತು ಪದ್ಧತಿ, ಧರ್ಮ,ಪಾತಿವ್ರತೆ, ಶೀಲ ಮುಂತಾದ ಸಿದ್ಧಮಾದರಿಗಳು ರೂಪುಗೊಂಡಿರುವಂಥದ್ದು. ಪ್ರಾಬಲ್ಯವನ್ನು ಹೊಂದಿದ ತನ್ನ ಹಿಡಿತವನ್ನು ಸಾಧಿಸಲು ಬಯಸುವ ಒಂದು ಬಲಿಷ್ಠವಾದ ಪುರುಷ ಸಮುದಾಯದಿಂದ.

ಇದನ್ನು ಧಾರ್ಮಿಕ ಚೌಕಟ್ಟಿನೊಳಗೆ ತಂದು ಪತಿಯೇ ದೈವವೆಂದು ಬಿಂಬಿಸುವ ಮೂಲಕ ಆಕೆಯ ಆಲೋಚನೆಗಳಿಗೆ, ಬೌದ್ಧಿಕ ಸಾಮರ್ಥ್ಯಕ್ಕೆ ಧರ್ಮ ನಂಬಿಕೆಗಳ ವೇಷವನ್ನು ಹೊದಿಸಿ ನಿರ್ಬಂಧಗೊಳಿಸಿರುವುದನ್ನು ಕಾಣಬಹುದು. ಆಕೆಯನ್ನು ನೀರಾಗಿಸಿ ತನ್ನ ಕಮಂಡಲದಲ್ಲಿ ಅಡಗಿಸಿಡುವ ಅಗಸ್ತ್ಯ ಲೌಕಿಕದ ಪುರುಷವಲಯದ ಸಿದ್ಧಾಂತಗಳಿಗೆ ನಿರ್ಬಂಧಿಸಿ ಆಕೆಯ ಹರೆಯದ ತುಮುಲಗಳನ್ನು ಅಡಗಿಸುವ ಪ್ರಯತ್ನ ಮಾಡುತ್ತಾನೆ.ಆದರೆ ನೀರನ್ನಾಗಿಸಿದ ಲೋಕಮುದ್ರಳನ್ನು ಆ ಶಕ್ತಿಯ ಮೂಲವನ್ನು ನಿರ್ಬಂಧಿಸುತ್ತೇನೆಂಬುದು ಒಂದು ಅಪಹಾಸ್ಯದ ಸಂಗತಿ.

ಮನುಧರ್ಮದ ಕಟ್ಟುಪಾಡುಗಳನ್ನು ತೊರೆದು ನಿಲ್ಲುವ,ಸಮಾಜಕ್ಕೆ ಅಟ್ಟಿಕೊಂಡ ಸತಿಧರ್ಮವೆಂಬ ಪದ್ಧತಿಯನ್ನು ವಿರೋಧಿಸುವ ಲೋಕಾಮುದ್ರಾ ಹಾಗಾದರೆ ಪತಿಧರ್ಮವೆಂಬುದೇನೆಂಬುದರ ಪ್ರಶ್ನೆಯಾಗುತ್ತಾಳೆ. ಆಕೆಯನ್ನು ರಕ್ಷಿಸುತ್ತೇನೆಂದು ಬಂಧನದಲ್ಲಿಡುವುದೇ? ಅಕೆಯ ಒಡೆಯನೆಂದು ದರ್ಪ ತೋರುವುದೇ? ತನ್ನ ಇಚ್ಛಾಶಕ್ತಿಗೆ ಬಳಸಿಕೊಳ್ಳುವುದೇ? ತನ್ನ ಕೆಲಸ ಕಾರ್ಯಗಳನ್ನು ನಿರ್ವಹಿಸುವ ದಾಸಿಯನ್ನಾಗಿಸುವುದೇ? ಇವುಗಳಲ್ಲಿನ ಧರ್ಮ ಯಾವುದು? ಇದನ್ನು ನಿರ್ವಹಿಸುವವಳು ಸತಿಯೋ ಅಥವಾ ದಾಸಿಯೋ ಎಂಬ ಪ್ರಶ್ನೆ ಉದ್ಭವಿಸುತ್ತದೆ.ಅರ್ಧನಾರೀಶ್ವರ ಪರಿಕಲ್ಪನೆಯಲ್ಲಿ ಸೃಷ್ಟಿತವಾದ ಸತಿಪತಿ

ಸಮರೆಂಬ ಭಾವವು ಭಾರತೀಯ ಪುರಾಣಗಳಲ್ಲಿ ಕಂಡುಬಂದರೂ ಕೂಡ ಸಮತೆಯೆಂಬ ಅಂಶಕ್ಕೆ ಯಾವುದೇ ಮೌಲ್ಯವಿಲ್ಲವೆಂಬ ಭಾವ ಲೋಕಾಮುದ್ರಾಳ ಪಾತ್ರದಲ್ಲಿ ಕಂಡುಬರುತ್ತದೆ.ಹರಿವ ನೀರನ್ನು ತಡೆದು ನಿಲ್ಲಿಸಿ ತನ್ನೊಳಗೆ ಹೀರಿಕೊಳ್ಳುವ ,ಬಂಧಿಸುವ ಪ್ರತಿಮೆ ಅಗಸ್ತ್ಯ ಮುನಿಯದಾದರೆ, ಆ ತಡೆಯಾದ ಲೋಕರೂಢಿಯನ್ನು ಒಡೆದು ರಭಸವಾಗಿ ನುಗ್ಗಿ ಸತಿ ಧರ್ಮವನ್ನು ಛೇಧಿಸಿ ತಾನು ಇಚ್ಛಿಸಿದ ಸ್ವತಂತ್ರದ ಕಡೆಗೆ ಹರಿವ ಲೋಕಮುದ್ರ ತನ್ನ ಆಸೆ ಆಕಾಂಕ್ಷೆಗಳಿಗೆ ಅನುಗುಣವಾಗಿ ಬದುಕುವ ಮಾನವ ಸಹಜ ಸ್ವತಂತ್ರದ ಮೂರ್ತಿಯಾಗಿದ್ದಾಳೆ.ಅಗಸ್ತ್ಯನದು ಸಂಸಾರದಲ್ಲಿದ್ದು ಅದನ್ನು ಮೀರಿ ನಿಂತು ಲೋಕಕಲ್ಯಾಣಕ್ಕಾಗಿ ನಿಲ್ಲಬೇಕೆಂಬ ನಿಲುವು.ತನ್ನ ಭಾವನೆಗೆ ಸ್ಪಂದಿಸದ ಸೂಕ್ಷ್ಮ ಸಂವೇದನೆಗೆ ಬೆಲೆಕೊಡದ ಕೌಟುಂಬಿಕ ಎಲ್ಲೆಗಳನ್ನು ಮೀರಿ ತನ್ನದೇ ಅಸ್ಮಿತೆಯನ್ನು ಕಂಡುಕೊಳ್ಳುವ ಅರಿವು ಲೋಕಾಮುದ್ರೆಯದು.ಇದು ಕೇವಲ ಲೋಕಾಮುದ್ರೆಯ ಬದುಕಿನ ಸಂಘರ್ಷವಲ್ಲ. ಬದಲಾಗಿ ಆಕೆಯಂತಿರುವ ಅನೇಕ ಸ್ತ್ರೀಯರ ವಾಸ್ತವ ಬದುಕಿನ ಸಂಘರ್ಷವಾಗಿದೆ.ಇಂಥ ಸ್ತ್ರೀ ಸಂವೇದನೆಗಳಿಗೆ ಸ್ಪಂದಿಸುವ ನಿಸ್ವಾರ್ಥ ಸ್ವಭಾವ ಪುರುಷ ಮನಸ್ಸುಗಳಿಗೆ ಬೇಕೆಂಬುದು ಮಾತ್ರ ಸತ್ಯ.

## ಆಧಾರ ಗ್ರಂಥಗಳು

1. ಲೋಕಾಮುದ್ರಾ– ಡಾ.ಕವಿತಾ ರೈ, ಕನ್ನಡ ಪುಸ್ತಕ ಪ್ರಾಧಿಕಾರ
2. ಆಧುನಿಕ ಕನ್ನಡ ನಾಟಕ–ಡಾ.ಕೆ ಮರುಳಸಿದ್ದಪ್ಪ, ಸ್ವಪ್ನ ಬುಕ್‌ಹೌಸ್
3. ಶತಮಾನ ಕನ್ನಡ ಸಾಹಿತ್ಯ ಸಮೀಕ್ಷಾ ಸಂಪುಟ 1–(ಸಂ)ಜಿ.ಎಚ್.ನಾಯಕ, ಅಭಿನವ ಪ್ರಕಾಶನ
4. ಕನ್ನಡದಲ್ಲಿ ಪೌರಾಣಿಕ ನಾಟಕಗಳು–ಡಾ.ಎಸ್.ಡಿ.ಶಶಿಕಲಾ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು